# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಮಧುಗಿರಿ

**ಎಸ್.ಸಿ.ಸಂಖ್ಯೆ:5033/2019 ಪ್ರಾಸಾ-33**

**ಚಾಸಾ-34**

ದಿನಾಂಕ:08-08-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಶಿವಣ್ಣ |
| ತಂದೆಯ ಹೆಸರು | ಮಾದೇಗೌಡ |
| ವಯಸ್ಸು | 44 |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಮರಳವಾಡಿ, ಕನಕಪುರ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-</u>**

ನನ್ನಲ್ಲಿ ಒಂದು ಇನೊವಾ ಕಾರು ಇದೆ ಅದರ ನಂಬರ್ ಕೆಎ-03-ಎಂಪಿ-4917. 6 ನೇಲ ಆರೋಪಿ ಬಸವರಾಜು ನನಗೆ ಗೊತ್ತಿಲ್ಲ. ನನಗೆ ಇನೊವಾ ಕಾರು ಬಿಟ್ಟು ಬೇರೆ ವಾಹನ ಇಲ್ಲ. ನಾನು 6 ನೇ ಆರೋಪಿಗೆ ಯಾವತ್ತೂ ನನ್ನ ಇನೊವಾ ಕಾರು ಕೊಟ್ಟಿಲ್ಲ. 2019 ನೇ ಇಸವಿಯಲ್ಲಿ ಕೊರಟರೆಗೆ ಪೊಲೀಸರು ನಮ್ಮ ಮನೆಯ ಹತ್ತಿರ ಬಂದು ನನ್ನ ಕಾರನ್ನು ವಶಕ್ಕೆ ತೆಗೆದುಕೊಂಡರು. ಮತ್ತು ಕಾರನ್ನು ತೆಗೆದುಕೊಂಡು ಹೋದರು ನಾನು ಕೇಳಿದಾಗ ಕೊರಟರೆಗೆ ಠಾಣೆಗೆ ಬನ್ನಿ ಅಲ್ಲಿ ಮಾತನಾಡುತ್ತೇವೆ ಎಂದು ಹೇಳಿದರು. ನಾನು ಎರಡು ದಿನ ಬಿಟ್ಟು ಕೊರಟರೆಗೆ ಠಾಣೆಗೆ ಹೋದೆ. ಕಾರು ಠಾಣೆಯಲ್ಲಿ ಇತ್ತು. ಆದರೆ ಆ ದಿನ ಕಾರು ಕೊಟ್ಟಿಲ್ಲ ಬಳಿಕ ನಾನು ವಕೀಲರ ಮೂಲಕ ಕಾರನ್ನು ಬಿಡಿಸಿಕೊಂಡಿದ್ದೇನೆ. ನಾನು ಪೊಲೀಸರಲ್ಲಿ ಕೇಳಿದಾಗ ಅವರು ಯಾಕೆ ಕಾರನ್ನು

ವಶಕ್ಕೆ ತೆಗೆದುಕೊಂಡು ಎಂದು ನನಗೆ ಹೇಳಿಲ್ಲ. ಬಳಿಕ ನನ್ನ ವಕೀಲರು ಯಾವುದೋ ಕೋಲೆ ಕೇಸಿನಲ್ಲಿ ಈ ಕಾರು ಸಿಕ್ಕಿಹಾಕಿಕೊಂಡಿದೆ ಎಂದು ಹೇಳಿದರು. ಆದರೆ ಯಾವ ಕೇಸು ಎಂದು ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ 1 ರಿಂದ 9 ಮತ್ತು 11 ರಿಂದ 14 ರಲ್ಲಿ ನನಗೆ ಗೊತ್ತಿಲ್ಲ. ನನ್ನ ಕಾರು ಯಾವ ಕೃತ್ಯದಲ್ಲಿ ಭಾಗಿಯಾಗಿದೆ ಎಂದು ನನಗೆ ಗೊತ್ತಿಲ್ಲ. ಅದನ್ನು ಯಾರು ಬಳಿದ್ದರು ಎಂದು ನನಗೆ ಗೊತ್ತಿಲ್ಲ. ಈ ಕೇಸಿಗೆ ಸಂಬಂದಪಟ್ಟ ಹಾಗೆ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ನಾನು ಚಂದ್ರಶೇಖರ್ ಎಂಬುವವರಿಗೆ ಕೂಡ ಕಾರನ್ನು ಬಾಡಿಗೆಗೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ಈ ಕೇಸಿನ 6 ನೇ ಆರೋಪಿ ಬಸವರಾಜು ನನಗೆ ಗೊತ್ತು ಎಂದರೆ ಸರಿಯಲ್ಲ. ನಾನು JCB ಕೂಡ ಇಟ್ಟುಕೊಂಡಿದ್ದೆ ಬಸವರಾಜು ರವರು ನನ್ನ JCB ಯನ್ನು ಅವರ ಕಾಂಟ್ರಾಕ್ಟ್ ಕೆಲಸಗಳಿಗೆ ಬಾಡಿಗೆಗೆ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ದಿಃ28-12-2018 ರಂದು ಬಸವರಾಜು ರವರು ನನಗೆ ಫೋನ್ ಮಾಡಿ ಒಂದು ವಾರದ ಮಟ್ಟಿಗೆ ನನ್ನ ಇನೋವಾ ಕಾರನ್ನು ಕೊಡುವಂತೆ ಕೇಳಿದರು ನಾನೂ ಅದಕ್ಕೆ ಒಪ್ಪಿದೆ ಅದೇ ದಿನ ಅವರ ಹುಡುಗ ಲೋಕೇಶ್ ಅಲಿಯಾಸ್ ಬುಡ್ಡ ನ್ಯಾಯಾಲಯದ ಮುಂದೆ ಇರುವ 11 ನೇ ಆರೋಪಿ ನನ್ನ ಬಳಿ ಬಂದು ಇನೋವಾ ಕಾರನ್ನು ತೆಗೆದುಕೊಂಡು ಹೋದ ಎಂದರೆ ಸರಿಯಲ್ಲ. 6 ನೇ ಆರೋಪಿಯವರು ನನ್ನ ಕಾರನ್ನು ತೆಗೆದುಕೊಂಡು ಹೋದ ಬಳಿಕ ಅವರ ಮೇಲೆ ಕೊಲೆ ಕೇಸು ಆಗಿ ಜೈಲಿಗೆ ಹೋದ ವಿಚಾರ ನನಗೆ ಗೊತ್ತಿಲ್ಲ. 6 ನೇ ಆರೋಪಿ ತನ್ನ ಮಗಳನ್ನು ಮತ್ತು ಮನು ಎಂಬುವವರನ್ನು ಚನ್ನರಾಯಪಟ್ಟಣದಿಂದ ಕರೆದುಕೊಂಡು ಬರಲು ನನ್ನ ಕಾರನ್ನು

ಉಪಯೋಗಿಸಿದ್ದರು ನನಗೆ ಗೊತ್ತಿಲ್ಲ. ಆರೋಪಿಗಳು ಮನು ಎಂಬುವವರನ್ನು 07-01-2019 ರಂದು ಕೊರಟಗೆರೆ ಬಳಿ ಕೊಲೆ ಮಾಡಿದ್ದಾರೆ ಎಂಬ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದೆರ ಸರಿಯಲ್ಲ. ಆ ಹೇಳಿಕೆಯಲ್ಲಿ ನಾನು ಮೇಲೆ ಹೇಳಿದಂತೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ದಿಃ23-03-2019 ರ ತನ್ನ ಹೇಳಿಕೆ ಎಂದು ಹೇಳಲಾದ ಹೇಳಿಕೆಯಲ್ಲಿ "ಬೆಂಗಳೂರಿನ ಕಾಮಾಕ್ಷಿಪಾಳ್ಯ .................................. ತೆಗೆದುಕೊಂಡು ಹೋಗಿದ್ದರಂತೆ" ಎಂಬ ಭಾಗವನ್ನು ನಿರಾಕರಿಸಿದ ಕಾರಣ ಸದರಿ ಭಾಗವನ್ನು ನಿಪಿ-66 ಎಂದು ಗುರುತಿಸಲಾಯಿತು. ನಾನು ನಿಪಿ-66 ರಂತೆ ಪೊಲೀಸರ ಮುಂದೆ ಹೆಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ.ಟಿ ಎಸ್ ಕೆ ಎಲ್ಲಾ ಆರೋಪಿ ಪರವಾಗಿಃ-**

ಪಾಟೀಸವಾಲು ಇಲ್ಲವೆಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಮಧುಗಿರಿ.**